# ‘ದರ್ಶನ್ ಜೊತೆ ನಟಿಸುವ ಆಸೆ

## ಮಾನಸ ನಾರಾಯಣ್

ಉದಯದ ‘ಕನ್ಯಾದಾನ’ದ
ಅರ್ಚನಾ

◆ ನಟನೆಯ ಆಸಕ್ತಿ ಹೇಗೆ ಮೂಡಿತು?

ಅಭಿನಯದ ಆಸಕ್ತಿ ಇರಲಿಲ್ಲ. ಹೇಗೆ ಹೇಗೋ ಬಂದು ನಟನೆ ಕಲಿತಿದ್ದೇನೆ. ಅದಕ್ಕಾಗಿ ತುಂಬ ಪರಿಶ್ರಮಪಟ್ಟಿದ್ದೇನೆ. ಮೊದಲು ನಾನು ನೃತ್ಯ ಅಭ್ಯಾಸ ಮಾಡ್ತಾಯಿದ್ದೆ. ನಮ್ಮ ಕುಟುಂಬದ ನಿರ್ಬಂಧದ ಕಾರಣ, ಅದನ್ನು ಅರ್ಧಕ್ಕೆ ನಿಲ್ಲಿಸಿದೆ. ನಂತರ ಸ್ಥಳೀಯ ಕೇಬಲ್ ವಾಹಿನಿಯಲ್ಲಿ ಆ್ಯಂಕರ್ ಆಗಿ ಕೆಲಸವನ್ನು ಆರಂಭಿಸಿದೆ. ಅದರಿಂದ ನಮ್ಮ ಮನೆಯವರಿಗೂ ಖುಷಿ ಆಯ್ತು. ನನ್ನ ಬೆನ್ನು ತಟ್ಟಿ ನಟನೆಗೆ ಪ್ರೋತ್ಸಾಹಿಸಿದರು. ಖುದ್ದು ನನ್ನ ಅಪ್ಪ ಆಡಿಷನ್‌ಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ನನಗೆ ನಟನೆ ಕಷ್ಟ ಆಗುತ್ತದೆ, ಆಗಲ್ಲ ಎಂದರೂ ಅವರು ‘ನಿನ್ನಿಂದ ಸಾಧ್ಯ ಮಾಡು’ ಎಂದೇ ಹುರಿದುಂಬಿಸಿದರು. ಅದರಿಂದ ನಟಿಯಾಗಲು ಸಾಧ್ಯವಾಗಿದೆ. ಮೊದಲು ತೆಲುಗಿನಲ್ಲಿ ಒಂದು ಧಾರಾವಾಹಿ ಮಾಡಿದ ನಂತರ ಕನ್ನಡಕ್ಕೆ ಬಂದೆ.

◆ ಅಭಿನಯವನ್ನು ದಕ್ಕಿಸಿಕೊಳ್ಳಲು ಹೇಗೆ ಸಾಧ್ಯವಾಯಿತು?

ಆಡಿಷನ್ ಕೊಡಲು ಕೂಡ ತುಂಬ ಭಯ ಆಗ್ತಾ ಇತ್ತು. ನನ್ನಿಂದ ಸಾಧ್ಯವಿಲ್ಲ ಎಂದುಕೊಳ್ಳುತ್ತಿದ್ದೆ. ಕೆಲವೊಮ್ಮೆ ಆಡಿಷನ್ ನೀಡಿ ಬಂದ ನಂತರ ಸಾಧ್ಯವಿಲ್ಲ ಎಂದೇ ಮನೆಯಲ್ಲಿ ಹೇಳ್ತಿದ್ದೆ. ಅಪ್ಪ–ಅಮ್ಮ ನಿನ್ನ ಪ್ರಯತ್ನ ಪ್ರಾಮಾಣಿಕವಾಗಿ ಇದ್ದರೆ, ಒಂದಲ್ಲ ಒಂದು ಅವಕಾಶ ಸಿಕ್ಕೇ ಸಿಗುತ್ತದೆ ಎನ್ನುತ್ತಿದ್ದರು. ತೆಲುಗು ಧಾರಾವಾಹಿಯಲ್ಲಿ ಅಭಿನಯಿಸುತ್ತಲೇ ನಟನೆಯ ಪಟ್ಟುಗಳನ್ನು ಕಲಿತೆ. ಅದಕ್ಕಾಗಿ ವಿಶೇಷ ತರಬೇತಿ ಪಡೆಯಲಿಲ್ಲ. ಪಾತ್ರ ಏನೇ ಬಯಸಿದರೂ ಮಾಡಲೇಬೇಕಾಗುತ್ತದೆ. ಈಗ ಭಯ ಎಂಬುದು ಇಲ್ಲ. ಎಂತಹ ಸವಾಲು ಇದ್ದರೂ ಹಿಂದೆ ಮುಂದೆ ನೋಡದೆ ಆತ್ಮವಿಶ್ವಾಸದಿಂದ ನಿರ್ವಹಿಸುತ್ತೇನೆ.

◆ ನಿಮ್ಮ ಪಾತ್ರದ ಆಯ್ಕೆಗೆ ಸಂಬಂಧಿಸಿದಂತೆ ಹೇಳುವುದಾದರೆ.

ನನಗೆ ನೆಗೆಟಿವ್ ಪಾತ್ರ ಅಂದರೆ ಸಖತ್ ಇಷ್ಟ. ಅದು ನನಗೆ ಹೊಂದುವುದಿಲ್ಲ ಎಂದು ತುಂಬ ಜನ ಹೇಳಿದ್ದಾರೆ. ಆದರೂ ನನಗೆ ಅಂತಹ ಪಾತ್ರ ಸಿಕ್ಕರೆ ಮಜಾ ಅನಿಸುತ್ತದೆ. ಅಂತಹ ಪಾತ್ರಗಳನ್ನು ಯಾವ ರೀತಿ ಮಾಡಿದರೂ ಚೆನ್ನಾಗಿರುತ್ತದೆ. ಏಕೆಂದರೆ ಜನ ದ್ವೇಷ ಮಾಡಿದಷ್ಟು ಪಾತ್ರದ ತೂಕ ಹೆಚ್ಚಾಗುತ್ತೆ ಎಂದು ಕೆಲವರು ಹೇಳುತ್ತಾರೆ. ‘ಕನ್ಯಾದಾನ’ದಲ್ಲಿ ನನ್ನ ಪಾತ್ರ ಪೆದ್ದಿಯ ರೀತಿ ಇದೆ. ಏನೂ ಗೊತ್ತಾಗದ ಮುಗ್ಧೆಯಂತೆ ಕಾಣಿಸಿಕೊಳ್ಳುತ್ತಿದ್ದೇನೆ. ತೆಲುಗಿನಲ್ಲಿ ಪ್ರಬುದ್ಧ ಪ್ರತಿಭಾವಂತೆಯಾಗಿದ್ದೆ. ಅದಕ್ಕೆ ಹೋಲಿಸಿದರೆ ಇದು ವಿರುದ್ಧವಾಗಿದೆ. ಹೀಗೆ ಪಾತ್ರಗಳಲ್ಲಿ ವೈವಿಧ್ಯ ಇರಬೇಕು. ಎಲ್ಲ ರೀತಿಯ ಪಾತ್ರವನ್ನೂ ಮಾಡಬೇಕು.

◆ ಖಾಸಗಿ ಜೀವನ ಹೇಗಿದೆ?

ಡಾನ್ಸರ್ ಆಗುವ ಆಸೆ ಇತ್ತು. ಅದಾಗಲು ಸಾಧ್ಯ ಆಗಲಿಲ್ಲ. ಒಂದೊಂದು ಆಡಿಷನ್ ಒಂದೊಂದು ಪಾಠವನ್ನು ಕಲಿಸಿತು. ಸರಣಿ ಆಡಿಷನ್‌ಗಳಿಂದ ಅವಕಾಶ ಪಡೆದು ಅಭಿನಯ ಕ್ಷೇತ್ರಕ್ಕೆ ಬಂದಿದ್ದೇನೆ. ಹಗಲು–ರಾತ್ರಿ ಎನ್ನದೆ ಚಿತ್ರೀಕರಣ ಇದ್ದರೂ ಖುಷಿಯಿಂದ ಮಾಡುತ್ತೇನೆ. ಕೆಲವೊಮ್ಮೆ ಮನೆಯಲ್ಲಿದ್ದರೆ ಬೋರ್ ಅನಿಸುತ್ತದೆ. ಬಾಲ್ಯದಲ್ಲಿ ಗಗನಸಖಿ ಆಗಬೇಕು ಎನ್ನುವ ಕನಸು ಕಂಡಿದ್ದೆ. ಹಂಗೂ ಹಿಂಗೂ ಬಿ.ಎಸ್.ಸಿ. ಮಾಡಿದೆ. ಆ ನಂತರ ಓದಿನ ಕಡೆ ಆಸಕ್ತಿ ಬರಲಿಲ್ಲ. ನಟನೆಯೇ ನನ್ನ ಜಗತ್ತಾಗಿದೆ. ಇದೆಲ್ಲ ನೋಡಿದರೆ ಹೇಗಿದ್ದವಳು ಹೇಗಾದೆ ಎಂದು ಅನಿಸುತ್ತದೆ. ಏಕೆಂದರೆ, ಹಳ್ಳಿಯಲ್ಲಿ ಹುಟ್ಟಿ ಬೆಳೆದ ನಾನು ಮೊದಲ ಆಡಿಷನ್‌ಗೆ ಹೋದಾಗ ನನ್ನ ಪರಿಚಯ ಹೇಳಿಕೊಳ್ಳಲೂ ಅಂಜುತ್ತಿದ್ದೆ. ಮನೆಯಲ್ಲೇ ಮೇಕಪ್ ಮಾಡಿಕೊಂಡು ಬರಲು ಹೇಳಿದ್ದರು. ನನಗೆ ತಿಳಿದಂತೆ ನಾನು ಸಿದ್ಧಳಾಗಿ ಹೋಗಿದ್ದೆ. ಅಲ್ಲಿ ಬಂದವರೆಲ್ಲ ಪಾತ್ರಕ್ಕೆ ಸಿದ್ಧವಾದಂತೆ ಕಾಣುತ್ತಿದ್ದರು. ಅದರಲ್ಲಿ ಬಹುತೇಕರು ನಟರೇ ಆಗಿದ್ದರು. ಸಣ್ಣಪುಟ್ಟ ಪಾತ್ರವನ್ನಾದರೂ ಮಾಡಿದವರೇ ಅಲ್ಲಿದ್ದರು. ನನಗೆ ಎಲ್ಲದೂ ಹೊಸತು. ಆಡಿಷನ್‌ನಲ್ಲಿ ‘ನನ್ನ ಹೆಸರು ಮಾನಸ ನಾರಾಯಣ್’ ಎಂದು ಹೇಳಲು ಮೂರು ಟೇಕ್ ತೆಗೆದುಕೊಂಡಿದ್ದೆ. ನಮ್ಮೂರಲ್ಲಿಯೂ ನನ್ನನ್ನು ನೋಡಿ ಆಡಿಕೊಳ್ಳುತ್ತಿದ್ದರು. ಎಷ್ಟೇ ಆಡಿಷನ್‌ಗೆ ಹೋದರು ಆಯ್ಕೆ ಆಗುತ್ತಿರಲಿಲ್ಲ. ಹೊಸ ಆಡಿಷನ್ನಿಗೆ ಹೊರಟರೆ ಇದೂ ಅಷ್ಟೇ ಎಂದು ಕಿಚಾಯಿಸುತ್ತಿದ್ದರು. ಈಗ ಅವರೇ ನನ್ನ ಪ್ರೋಮೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಷೇರ್ ಮಾಡುತ್ತಾರೆ.

◆ ಮುಂದಿನ ಪಾತ್ರದ ಬಗ್ಗೆ?

ಅನೇಕ ಮೇಕಪ್ ಕಲಾವಿದರು ನನಗೆ ಸಿನಿಮಾ ಮಾಡಿ ಎಂಬ ಸಲಹೆ ನೀಡುತ್ತಾರೆ. ಏಕೋ ಅದು ಗೊತ್ತಿಲ್ಲ. ಅವರೆಲ್ಲ ಸಿನಿಮಾದಲ್ಲಿ ಬೇಗ ಕ್ಲಿಕ್ ಆಗ್ತೀರಿ ಅಂತಾರೆ. ನನಗೂ ಸಿನಿಮಾ ಮಾಡಬೇಕು ಎನ್ನುವ ಆಸೆ ಇದೆ. ಅದರಲ್ಲೂ ದರ್ಶನ್ ಅವರ ಜೊತೆ ಒಂದಾದರೂ ಸಿನಿಮಾ ಮಾಡಬೇಕು. ನಾಯಕಿ ಆಗದಿದ್ದರೂ ಅವರ ತಂಗಿ ಪಾತ್ರದಲ್ಲಾದರೂ ಕಾಣಿಸಿಕೊಳ್ಳುವ ಆಸೆ ಇದೆ. ಮುಂದೆ ಒಳ್ಳೆಯ ಪ್ರೊಡಕ್ಷನ್ ಒಳ್ಳೆಯ ಕಥೆ ಸಿಕ್ಕರೆ ಎಂತಹ ಪಾತ್ರವಾದರೂ ಮಾಡುತ್ತೇನೆ.

■ ರಾಘವೇಂದ್ರ ಕೆ.

